# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/1233-1234/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 28/12/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: (1) ಶ್ರೀಮತಿ ಎಸ್.ಎಸ್.ಬಳ್ಳಾರಿ, ಉಪ ನಿರ್ದೇಶಕರು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ ಮತ್ತು, (2) ಶ್ರೀ ಐ.ಬಿ.ದಯಣ್ಣನವರ್, ತಾಲ್ಲೂಕು ಆಹಾರ ನಿರೀಕ್ಷಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹುಕ್ಕೇರಿ ತಾಲ್ಲೂಕು, ಬೆಳಗಾಂ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ದೂರುದಾರರಾದ ಶ್ರೀ ಬಾಳಪ್ಪ ಅರ್ಜುನ ಬನ್ನಕ್ಕಗೋಳ, ಮದಿಹಳ್ಳಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀಮತಿ ಎಸ್.ಎಸ್.ಬಳ್ಳಾರಿ, ಉಪ ನಿರ್ದೇಶಕರು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ ಮತ್ತು, (2) ಶ್ರೀ ಐ.ಬಿ.ದಯಣ್ಣನವರ್, ತಾಲ್ಲೂಕು ಆಹಾರ ನಿರೀಕ್ಷಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹುಕ್ಕೇರಿ ತಾಲ್ಲೂಕು, ಬೆಳಗಾಂ ಜಿಲ್ಲೆ (ಇನ್ನು ಮುಂದೆ 1 ಮತ್ತು 2 ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಆಪಾದಿಸಿ ಈ ಕಛೇರಿಗೆ ದೂರು ಸಲ್ಲಿಸಿರುತ್ತಾರೆ.

## 2. ಪ್ರಕರಣದ ಸಂಕ್ಷಿಪ್ತ ಸಾರಾಂಶ:

ದಿನಾಂಕ: 27/06/2015 ರಂದು ಮದಿಹಳ್ಳಿ ನ್ಯಾಯ ಬೆಲೆ ಅಂಗಡಿ ನಂ. 106ರನ್ನು ಸಮೀಪದ ಗ್ರಾಮದ ಬೆಣಿವಾಡದ ಪಿ.ಕೆ.ಪಿ.ಎಸ್. ಸಂಘಕ್ಕೆ ಪಡಿತರ ವಿತರಣೆಗಾಗಿ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದು ನ್ಯಾಯ ಬೆಲೆ ಅಂಗಡಿಯಲ್ಲಿ ನಿಜವಾದ ಪಿ.ಕೆ.ಪಿ.ಎಸ್. ಬೆಣಿವಾಡದವರು ನೀಡುತ್ತಿಲ್ಲ ಗ್ರಾಮದವರೇ ಆದ ಕೆಲ ಪುಂಡರು ಶ್ವೇತವಸ್ತ್ರಧಾರಿಗಳು

ಅಮಾಯಕರ ಮೇಲೆ ನಿಂದನೆ, ಬೈಗುಳ, ದೌರ್ಜನ್ಯ ಮಾಡುತ್ತಾ ಪಡಿತರ ವಿತರಣೆಯಲ್ಲಿ ಲೋಪವೆಸಗುತ್ತಿದ್ದಾರೆ. ಅಲ್ಲದೇ ಪಡಿತರ ವಿತರಣೆಯ ರಸೀದಿ ಸಹಾ ನೀಡುತ್ತಿಲ್ಲ ಮತ್ತು ನಗದು ರೂ.100/- ಗಳಿಗಿಂದ ಹೆಚ್ಚಿಗೆ ಪಡೆಯುತ್ತಿದ್ದಾರೆ. ಕೇಳಲು ಹೋದರೆ ಅವ್ಯಾಚ ಶಬ್ದದಿಂದ ಬೈಯುತ್ತಿದ್ದಾರೆ. ಖಾಸಗಿ ಟ್ರ್ಯಾಕ್ಟರ್‌ನಲ್ಲಿ ಸೀಮೆಎಣ್ಣೆ ಬ್ಯಾರಲ್ ಹೇರಿಕೊಂಡು ಕಳ್ಳ ಸಾಗಣಿಕೆ ಮಾಡುತ್ತಿರುತ್ತಾರೆ. ಸೀಮೆಎಣ್ಣೆ ಸಾಗಣಿಕೆಯು ಸರ್ಕಾರಿ ವಾಹನದಲ್ಲಿ ಸಾಗಣೆ ಮಾಡಬೇಕಿರುತ್ತದೆ. ಸುಮಾರು 20 ರಿಂದ 25 ಕಾರ್ಡ್‌ಗಳು ಮೃತರದ್ದು ಇದ್ದು ಅವರ ಧಾನ್ಯ, ಸೀಮೆಎಣ್ಣೆ, ಕಳ್ಳ ಸಾಗಾಣೆ ಮಾಡಿ ಕಿರಾಣಿ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ ಹಾಗೂ ತಿಂಗಳಲ್ಲಿ ಮೂರು ದಿನ ಮಾತ್ರ ಪಡಿತರ ವಿತರಣೆ ಮಾಡುತ್ತಾರೆ. ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಕ್ರಮ ಕೈಗೊಳ್ಳಲಿಲ್ಲ. ಕಾರಣ ಎದುರುದಾರರ ವಿರುದ್ಧ ತನಿಖೆ ಮಾಡಬೇಕೆಂದು ಕೋರಿರುತ್ತಾರೆ.

3. **1ನೇ ಎದುರುದಾರರು ತಮ್ಮ ಆಕ್ಷೇಪಣೆಯ**ಲ್ಲಿ ತಹಶೀಲ್ದಾರ ಹುಕ್ಕೇರಿ ಇವರು ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸಿದ್ದು ವರದಿಯಲ್ಲಿ ಮದಿಹಳ್ಳಿ ಗ್ರಾಮದ ಅಂಗಡಿ ನಂ.106 ನೇದ್ದಕ್ಕೆ ಸಂಬಂಧಿಸಿದಂತೆ ಪಡಿತರ ಸಾಮಗ್ರಿಗಳನ್ನು ಹಾಗೂ ಸೀಮೆಎಣ್ಣೆಯನ್ನು ಬೆಣಿವಾಡ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನ್ಯಾಯಬೆಲೆ ಅಂಗಡಿ ಸಂಖ್ಯೆ:126 ನೇದ್ದಕ್ಕೆ ಸಂಬಂಧಿಸಿದ ಸಿಬ್ಬಂದಿಯವರು ಮದಿಹಳ್ಳಿ ಗ್ರಾಮ ಪಂಚಾಯತ ಕಾರ್ಯಾಲಯದ ಕಟ್ಟಡದಲ್ಲಿ ಸ್ಥಳೀಯ ಪಿಕೆಪಿಎಸ್ ಸಂಘ ಮದಿಹಳ್ಳಿ ಸಿಬ್ಬಂದಿಗಳ ಸಹಾಯ ಪಡೆದುಕೊಂಡು ವಿತರಣೆ ಮಾಡುತ್ತಿದ್ದಾರೆ. ಸರ್ಕಾರ ನಿಗದಿಪಡಿಸಿದ ದರ ಹಾಗೂ ಪ್ರಮಾಣದಂತೆ ಆಹಾರ ದಾನ್ಯಗಳನ್ನು ಮತ್ತು ಸೀಮೆ ಎಣ್ಣೆ ವಿತರಿಸಲಾಗುತ್ತಿದೆ. ಮದಿಹಳ್ಳಿ ಗ್ರಾಮದ ಪಡಿತರವನ್ನು ಕಾರ್ಡುದಾರರಿಗೆ ಬಯೋಮೆಟ್ರಿಕ್ ಮೂಲಕ ಪಡಿತರವನ್ನು ವಿತರಿಸಲಾಗುತ್ತಿದೆ. ಇದರಿಂದ ಪಡಿತರ ಚೀಟಿದಾರರಿಗೆ ವಂಚನೆ ಮಾಡಲು ಆಗುವುದಿಲ್ಲ. ತಹಶೀಲ್ದಾರ ಹುಕ್ಕೇರಿ ಇವರಿಗೆ ಸಹ ಕ್ರಮವಹಿಸಲು ಸೂಕ್ತ ನಿರ್ದೇಶನ ನೀಡಿದೆ ಎಂದು ನಮೂದಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ವರದಿ ಪ್ರತಿ, ಪಂಚನಾಮೆ ಪ್ರತಿ, ಹೇಳಿಕೆ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

4. 1 ನೇ ಎದರುದಾರನು ಕಾಲಕಾಲಕ್ಕೆ ಪಡಿತರ ಅಂಗಡಿಗಳನ್ನು ಪರಿಶೀಲಿಸಿ ವಾಸ್ತವಾಂಶಗಳನ್ನು ನೋಡಿದ್ದಲ್ಲಿ, ಪಡಿತರ ವಿತರಕರು ಯಾವ ರೀತಿಯಲ್ಲಿ ಪಡಿತರ

ಪದಾರ್ಥಗಳನ್ನು ವಿತರಿಸುತ್ತಿದ್ದಾರೆ ಎಂಬುದು ಖಾತರಿ ಪಡಿಸಿಕೊಳ್ಳಬಹುದಾಗಿತ್ತು. ಆದರೆ 2ನೇ ಎದುರುದಾರರು ತನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದಾನೋ ಅಥವಾ ಇಲ್ಲವೋ ಎಂಬುದನ್ನು ಸಹಾ ಪರಿಶೀಲಿಸದೇ ಹೋಗಿರುವುದು ದಿ: 21/09/2015 ರ ಜಿಲ್ಲಾಧಿಕಾರಿಗಳ ಆದೇಶದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ, 1 ನೇ ಎದುರುದಾರರು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಿರುವುದಿಲ್ಲವೆಂದು ಹಾಗೂ ತನ್ನ ಅಧೀನ ಅಧಿಕಾರಿಗಳು ಸರಿಯಾಗಿ ಕರ್ತವ್ಯ ವನ್ನು ನಿರ್ವಹಿಸುತ್ತಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಪರಿಶೀಲನೆಯನ್ನು ಸಹಾ ಮಾಡಿರುವುದಿಲ್ಲ. ಇದರಿಂದ ಪಡಿತರ ಪದಾರ್ಥಗಳು ಅಂಗಡಿಗಳಿಂದ ಮೃತವ್ಯಕ್ತಿಗಳ ಹೆಸರಿಗೆ ಕೊಟ್ಟಿ ಇರುವುದು ಪಡೆದು ವಿತರಿಸಿರುವುದು ಕಂಡುಬರುತ್ತದೆ.

5. **2ನೇ ಎದುರುದಾರರ ಆಕ್ಷೇಪಣೆಗಳು:** ದಿನಾಂಕ:02.05.2017ರಂದು ಮದಿಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಮದಿಹಳ್ಳಿ ಗ್ರಾಮದ ಅಂಗಡಿ ನಂ.106ನೇದ್ದರ ಪಡಿತರ ಸಾಮಗ್ರಿಗಳನ್ನು ಹಾಗೂ ಸೀಮೆ ಎಣ್ಣೆಯನ್ನು ಬೆಣಿವಾಡ ಗ್ರಾಮದ ಪಿಕೆಪಿಎಸ್ (ವಿ.ಎಸ್.ಎಸ್.ಎನ್.) ಸಂಘ ನ್ಯಾಯಬೆಲೆ ಅಂಗಡಿ ಸಂಖ್ಯೆ 126ನೇದ್ದಕ್ಕೆ ಸಂಬಂಧಿಸಿದ ಸಿಬ್ಬಂದಿಗಳು, ಮದಿಹಳ್ಳಿ ಗ್ರಾಮಪಂಚಾಯತ ಕಾರ್ಯಾಲಯದ ಕಟ್ಟಡದಲ್ಲಿ ಮದಿಹಳ್ಳಿ ಗ್ರಾಮದ ಎರಡು ಜನರ ಸಹಾಯ ಪಡೆದು ವಿತರಣೆ ಮಾಡುತ್ತಿದ್ದಾರೆ. ಪಡಿತರ ಸಾಮಗ್ರಿಗಳನ್ನು ಮತ್ತು ಸೀಮೆ ಎಣ್ಣೆಯನ್ನು ಸಗಟು ಮಾರಾಟ ಮಳಿಗೆಗಳಿಂದ ನೇರವಾಗಿ ನ್ಯಾಯಬೆಲೆ ಅಂಗಡಿಗೆ ತಲುಪಿಸಲಾಗುತ್ತಿದೆ. ನ್ಯಾಯಬೆಲೆ ಅಂಗಡಿಯಲ್ಲಿ ಗಣಕಯಂತ್ರದ ಮೂಲಕ ವಿತರಣೆ ಮಾಡುತ್ತಿರುವುದರಿಂದ, ಕಾರ್ಡುದಾರರಿಗೆ ಯಾವುದೇ ಮೋಸ ಮಾಡಲು ಅವಕಾಶ ಇರುವುದಿಲ್ಲ. ಯಾವ ಕಾರ್ಡುದಾರರು ಬಯೋಮೆಟ್ರಿಕ್ ಮಾಡುವುದಿಲ್ಲವೋ ಅವರ ಪಡಿತರ ಸಾಮಗ್ರಿಗಳು ಮರಳಿ ಸರ್ಕಾರಕ್ಕೆ ಜಮಾ ಆಗುತ್ತದೆ. ಮೃತರಾದವರ, ಪರಸ್ಥಳಕ್ಕೆ ಹೋದವರ ಕಾರ್ಡುದಾರರ ಪಡಿತರ ಸಾಮಗ್ರಿಗಳನ್ನು ಸಹಿತ ಅಂಗಡಿಕಾರರಿಗೆ ದುರುಪಯೋಗ ಪಡಿಸಿಕೊಳ್ಳಲು ಬರುವುದಿಲ್ಲ ಎಂದು ನಮೂದಿಸಿರುತ್ತಾರೆ. ಮಾಸಿಕ ಪಡಿತರ ವಿವರ ತಃಖ್ತೆಯ ಪ್ರತಿಯನ್ನು ಸಲ್ಲಿಸಿರುತ್ತಾರೆ.

6. **ಪಿರ್ಯಾದುದಾರರ ಪ್ರತ್ಯುತ್ತರ**: ಗ್ರಾಮಸ್ಥರು ಜಂಟಿಯಾಗಿ ಪ್ರತ್ಯುತ್ತರ ಸಲ್ಲಿಸಿ ಎದುರುದಾರರ ಆಕ್ಷೇಪಣೆಗಳನ್ನು ಪೂರ್ಣವಾಗಿ ನಿರಾಕರಿಸಿರುತ್ತಾರೆ. ಹುಕ್ಕೇರಿ ತಹಶೀಲ್ದಾರರು ಸ್ಥಳಕ್ಕೆ ಬಂದು ತನಿಖೆ ಮಾಡಿಲ್ಲವೆಂದು ಗ್ರಾಮದವರಿಗೆ ನೋಟಿಸು ನೀಡಿಲ್ಲವೆಂದು ಸುಳ್ಳು ವರದಿ ಸಲ್ಲಿಸಿರುತ್ತಾರೆಂದು, 2015 ರಿಂದ 2018ರ ಅವಧಿಯ ಒಳಗೆ ಇರುವ ಸ್ಟಾಕ್ ಮತ್ತು ಸೇಲ್ ರಿಜಿಸ್ಟರ್‌ಗಳನ್ನು ಪರಿಶೀಲಿಸಬೇಕೆಂದು ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ವಿತರಣೆಯ ರಸೀದಿ ನೀಡದೆ ಹೆಚ್ಚಿನ ಹಣ ಪಡೆಯುತ್ತಿದ್ದು ಸೀಮೆಎಣ್ಣೆ ಕಳ್ಳ ಸಾಗಾಣಿಕೆ ಮಾಡುತ್ತಾ ಮೃತ ಕಾರ್ಡುದಾರರ ಪಡಿತರ ಮಾರಾಟ ಮಾಡಿ ಅಕ್ರಮ ಮಾಡಿದ್ದರೂ ಎದುರುದಾರರು ಕ್ರಮ ಜರುಗಿಸದೇ ಇರುವುದು ಶಾಮೀಲಾಗಿರುವುದು ಕಂಡುಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

7. ಪೋಲಿಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲೀಸ್, ಬೆಳಗಾವಿ ರವರಿಗೆ ಪ್ರಸ್ತುತ ಪ್ರಕರಣದ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದು, ಸದರಿಯವರು ತಮ್ಮ ತನಿಖಾ ವರದಿಯನ್ನು ಈ ಕೆಳಗಿನಂತೆ ನೀಡಿರುತ್ತಾರೆ :-

8. ಮದಿಹಳ್ಳಿ ಗ್ರಾಮದಲ್ಲಿ ಮೊದಲಿನಿಂದಲೂ ರಾಹುಲ ಕತ್ತಿ ಯುವಕ ಮಂಡಳ, ಮದಿಹಳ್ಳಿ ಇವರು ನ್ಯಾಯಬೆಲೆ ಅಂಗಡಿ ನಡೆಸುತ್ತಿದ್ದು, ಸದರಿಯವರು ಪಡಿತರ ಸಾಮಗ್ರಿಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ ಮತ್ತು ಮೃತಪಟ್ಟವರ ಹೆಸರಿಗೆ ಖೋಟ್ಟಿ ರುಜು ಮಾಡಿ ಪಡಿತರ ವಿತರಣೆ ಮಾಡಿದ ಬಗ್ಗೆ ತಿಳಿದು ಬಂದಿದ್ದರಿಂದ ತಹಶೀಲದಾರ ಹುಕ್ಕೇರಿರವರು ದಿನಾಂಕ: 09.07.2015 ರಂದು ಸದರಿ ನ್ಯಾಯಬೆಲೆ ಅಂಗಡಿಯನ್ನು ರದ್ದು ಮಾಡುವ ಕುರಿತು ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿರವರಿಗೆ ಪತ್ರ ಬರೆದುಕೊಂಡಿದ್ದು ಇರುತ್ತದೆ. ಅವರು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿರವರಿಗೆ ಈ ಕುರಿತು ಪತ್ರ ಬರೆದುಕೊಂಡಿದ್ದರಿಂದ, ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 21.09.2015 ರಂದು ಮದಿಹಳ್ಳಿ ಗ್ರಾಮದ ರಾಹುಲ ಕತ್ತಿ ಯುವಕ ಮಂಡಳದ ನ್ಯಾಯಬೆಲೆ ಅಂಗಡಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಟ್ಟು, ಬೆಣಿವಾಡ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮದಿಹಳ್ಳಿ ಗ್ರಾಮದ ಜನರಿಗೆ ಪಡಿತರ ವಿತರಣೆ ಮಾಡುವ ಸಲುವಾಗಿ

ಪರ್ಯಾಯ ವ್ಯವಸ್ಥೆ ಮಾಡುವ ಕುರಿತು ಆದೇಶ ಮಾಡಿದ್ದು ಇರುತ್ತದೆ. ಅದರಂತೆ ಕಾರ್ಯದರ್ಶಿ ಪಿ.ಕೆ.ಪಿ.ಎಸ್. ಬೆಣಿವಾಡರವರು ಮದಿಹಳ್ಳಿ ಗ್ರಾಮದ ಜನರಿಗೆ ಪಡಿತರ ವಿತರಣೆ ಮಾಡುವ ಕುರಿತು ಪಡಿತರ ಸಾಮಗ್ರಿಗಳನ್ನು ಮದಿಹಳ್ಳಿ ಗ್ರಾಮದಲ್ಲಿ ಸಂಗ್ರಹಿಸಿ, ಅಲ್ಲಿಯ ಇಬ್ಬರು ಜನರನ್ನು ಸಹಾಯಕರಾಗಿ ಪಡೆದು ಪಡಿತರ ವಿತರಣೆ ಮಾಡುತ್ತಿದ್ದರು. ತದನಂತರ ರಾಹುಲ ಕತ್ತಿ ಯುವಕ ಮಂಡಳದ ನ್ಯಾಯಬೆಲೆ ಅಂಗಡಿಯ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದಿದ್ದು, ಆ ಕಾಲಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ:31.03.2016 ರಂದು ರಾಹುಲ ಕತ್ತಿ ಯುವಕ ಮಂಡಳಿಯವರಿಗೆ ನ್ಯಾಯಬೆಲೆ ಅಂಗಡಿಯ ಅಮಾನತ್ತು ಆದೇಶವನ್ನು ಹಿಂಪಡೆದು ಮದಿಹಳ್ಳಿ ಗ್ರಾಮದ ಜನರಿಗೆ ಪಡಿತರ ವಿತರಣೆ ಮಾಡುವ ಕುರಿತು ಆದೇಶ ಮಾಡಿದ್ದು ಇರುತ್ತದೆ. ಆದರೆ, ಅವರು ನ್ಯಾಯಬೆಲೆ ಅಂಗಡಿ ಮುಖಾಂತರ ಪಡಿತರ ವಿತರಣೆ ಮಾಡಲಿಲ್ಲ. ಆಗ ಮದಿಹಳ್ಳಿ ಗ್ರಾಮದ ಕೆಲಜನರು ಮಾನ್ಯ ಆಯುಕ್ತರು, ಮತ್ತು ಮೇಲ್ಮನವಿ ಪ್ರಾಧಿಕಾರಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರಿಗೆ ಮೇಲ್ಮನವಿ ಸಲ್ಲಿಸಿದ್ದರಿಂದ ಮಾನ್ಯ ಆಯುಕ್ತರು ಮತ್ತು ಮೇಲ್ಮವಿ ಪ್ರಾಧಿಕಾರ, ಬೆಂಗಳೂರುರವರು ಜಿಲ್ಲಾಧಿಕಾರಿಗಳ ಆದೇಶಕ್ಕೆ ದಿನಾಂಕ: 21.04.2016 ರಂದು ಮುಂದಿನ ವಿಚಾರಣಾ ದಿನಾಂಕದವರೆಗೆ ತಡೆಯಾಜ್ಞೆ ನೀಡಿ ಆದೇಶಿಸಿದ್ದು ಇರುತ್ತದೆ. ಆಗ ರಾಹುಲ ಕತ್ತಿ ಯುವಕ ಮಂಡಳದ ಸದಸ್ಯರು ಪಿ.ಕೆ.ಪಿ.ಎಸ್. ಬೆಣಿವಾಡರವರು ಸ್ವತಃ ವಿತರಣೆ ಮಾಡದೇ ಸ್ಥಳೀಯ ಜನರ ಮುಖಾಂತರ ಪಡಿತರ ವಿತರಣೆ ಮಾಡುತ್ತಿದ್ದಾರೆ ಅದನ್ನು ಬಂದ ಮಾಡಿಸಬೇಕೆಂದು ತಕರಾರು ಮಾಡಿದ್ದರಿಂದ ಶ್ರೀ ಈರಪ್ಪ ಬಸಪ್ಪ ದಯನ್ನವರ, ಆಹಾರ ನಿರೀಕ್ಷಕರು, ಹುಕ್ಕೇರಿರವರು ವಿಚಾರಣೆ ಮಾಡಿ, ತಹಶೀಲದಾರ ಹುಕ್ಕೇರಿರವರಿಗೆ ದಿನಾಂಕ: 02.05.2017 ರಂದು ವರದಿ ನೀಡಿದ್ದು, ಅದರಂತೆ, ತಹಶಿಲ್ದಾರರು ಹುಕ್ಕೇರಿರವರು ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿರವರಿಗೆ ಪತ್ರ ಬರೆದುಕೊಂಡಿದ್ದು ಇರುತ್ತದೆ. ಅದೇ ಸಂದರ್ಭದಲ್ಲಿ ಮದಿಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರು ನ್ಯಾಯಬೆಲೆ ಅಂಗಡಿ ಮಂಜೂರಾತಿ ಕುರಿತು ಅರ್ಜಿ ಸಲ್ಲಿಸಿದ್ದು ಇರುತ್ತದೆ. ದಿನಾಂಕ: 22.10.2018 ರಂದು ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿರವರು ಮದಿಹಳ್ಳಿ

ಪಿ.ಕೆ.ಪಿ.ಎಸ್.ರವರಿಗೆ ಇನ್ನೊಂದು ಹೊಸ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಿ ಆದೇಶ ಮಾಡಿರುತ್ತಾರೆ. ಆವಾಗಿನಿಂದ ಇಲ್ಲಿಯವರೆಗೆ ಮದಿಹಳ್ಳಿ ಪಿ.ಕೆ.ಪಿ.ಎಸ್.ನವರು ಮದಿಹಳ್ಳಿ ಗ್ರಾಮದ ಜನರಿಗೆ ಪಡಿತರ ವಿತರಣೆ ಮಾಡುತ್ತಿರುವುದು ನಾವು ಭೇಟ್ಟಿ ನೀಡಿದ ಕಾಲಕ್ಕೆ ಹಾಗೂ ನಮ್ಮ ವಿಚಾರಣೆಯಲ್ಲಿ ಕಂಡು ಬಂದಿರುತ್ತದೆ.

9. ಪಡಿತರ ತೆಗೆದುಕೊಳ್ಳಲು ಬಂದ ಮದಿಹಳ್ಳಿ ಗ್ರಾಮದ ಪಡಿತರ ಚೀಟಿದಾರರಿಗೆ ನಾವು ಗೌಪ್ಯವಾಗಿ ವಿಚಾರಣೆ ಮಾಡಲಾಗಿ ಪಡಿತರ ವಿತರಣೆಯಲ್ಲಿ ಬಿ.ಪಿ.ಎಲ್. (ಪಿಎಚ್‌ಎಚ್) ಪಡಿತರ ಚೀಟಿ ಹೊಂದಿದವರಿಗೆ ಕುಟುಂಬದ ಒಬ್ಬ ಸದಸ್ಯರಿಗೆ ಉಚಿತವಾಗಿ ತಲಾ 7 ಕೆ.ಜಿ. ಅಕ್ಕಿ ಹಾಗೂ ಅಡುಗೆ ಅನಿಲ ಹೊಂದದೇ ಇದ್ದವರಿಗೆ ಪ್ರತಿ ಲೀಟರಗೆ 35/- ರೂ. ದರದಂತೆ 3 ಲೀ. ಸೀಮೆಎಣ್ಣೆ ಮತ್ತು ಅಡುಗೆ ಅನಿಲ ಹೊಂದಿದವರಿಗೆ ಸೀಮೆಎಣ್ಣೆ ಬೇಕೆಂದು ಬೇಡಿಕೆಯನ್ನು ಸಲ್ಲಿಸಿದವರಿಗೂ ಸಹ 35/- ರೂ. ದರದಂತೆ 1 ಲೀಟರ ಮಾತ್ರ ವಿತರಿಸುತ್ತಿದ್ದು, ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳಿಗೆ 35 ಕೆ.ಜಿ. ಅಕ್ಕಿ ಉಚಿತವಾಗಿ ವಿತರಿಸುತ್ತಿರುವುದಾಗಿ ಹಾಗೂ ಸರಕಾರವು ನಿಗದಿಪಡಿಸಿರುವದಕ್ಕಿಂತ ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳುವುದಿಲ್ಲ ಅಂತಾ ಹಾಗೂ ತಮ್ಮ ಪಿ.ಕೆ.ಪಿ.ಎಸ್.ದ ವತಿಯಿಂದ ತೊಗರಿಬೇಳೆ, ಸಾಬೂನು ಮತ್ತು ಸಾಬೂನಪುಡಿ ಮಾರಾಟ ಮಾಡುತ್ತಾರೆ ಅಂತ ತಿಳಿಸಿರುತ್ತಾರೆ.

10. ಶ್ರೀ ಭೀಮಸೇನ ಬಾಳಪ್ಪ ಬಾಗಿ ಸಾ: ಮದಿಹಳ್ಳಿ ಇವರು ಮದಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಇದ್ದು, ಶ್ರೀ ಮಲ್ಲಪ್ಪ ಬಸವಣ್ಣಿ ಮಾನಗಾಂವ ಸಾ: ಮದಿಹಳ್ಳಿ ಇವರು ಕಾರ್ಯದರ್ಶಿಯಿದ್ದು, ಶ್ರೀ ಮಲಿಕಜಾನ ಗೌಸ ಅವರಗೋಳ ಸಾ: ಮದಿಹಳ್ಳಿ ಇವರು ಸದಸ್ಯರು ಇರುತ್ತಾರೆ. 1) ಶ್ರೀ ಮಲ್ಲಪ್ಪ ಬಸವಣ್ಣಿ ಮಾನಗಾಂವ 2) ಶ್ರೀ ಮಲಿಕಜಾನ ಗೌಸ ಅವರಗೋಳ 3) ಶ್ರೀ ರಾಜು ಕಾಡಪ್ಪ ಬುಗಡಿಕಟ್ಟಿ ಸಾ: ಎಲ್ಲರೂ ಮದಿಹಳ್ಳಿ ಇವರೇ ಸಾರ್ವಜನಿಕರಿಗೆ ಪಡಿತರ ವಿತರಣೆ ಮಾಡುತ್ತಿರುವುದು ವಿಚಾರಣೆ ಕಾಲಕ್ಕೆ ಕಂಡು ಬಂದಿರುತ್ತದೆ. ಪಡಿತರ ತೆಗೆದುಕೊಳ್ಳಲು ಬಂದ ಸಾರ್ವಜನಿಕರಿಗೆ ಸೀಮೆಎಣ್ಣೆ ಸರಿಯಾಗಿ ವಿತರಣೆ ಮಾಡುತ್ತಾರೋ ಹೇಗೆ? ಅಂತಾ ವಿಚಾರಿಸಲಾಗಿ ಸರಿಯಾಗಿ ವಿತರಣೆ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ನಾವು ಸಹ ಖುದ್ದಾಗಿ ಸೀಮೆಎಣ್ಣೆ

ಪರಿಶೀಲನೆ ಮಾಡಲಾಗಿ ಸ್ಟಾಕ್ ರಜಿಸ್ಟರನಲ್ಲಿ ನಮೂದ ಮಾಡಿರುವ ಹಾಗೂ ಭೌತಿಕವಾಗಿ ಇರುವ ಸೀಮೆಎಣ್ಣೆ ಸರಿಯಾಗಿರುವುದು ಕಂಡು ಬಂದಿರುತ್ತದೆ.

11. ಅರ್ಜಿದಾರರು ಸುಮಾರು 20 ರಿಂದ 25 ಕಾರ್ಡಗಳು ಮೃತರಾಗಿದ್ದು ಇರುತ್ತದೆ ಅಂತಾ ನಮೂದು ಮಾಡಿದ್ದು, ಸನ್ 2015 ರಲ್ಲಿ ರಾಹುಲ್ ಕತ್ತಿ ಯುವಕ ಮಂಡಳದವರು ರಜಿಸ್ಟರನಲ್ಲಿ ಮೃತರ ಖೋಟ್ಟಿ ಸಹಿ ಮಾಡಿ ಪಡಿತರ ವಿತರಣೆ ಮಾಡಿದ್ದು ಕಂಡು ಬಂದಿದ್ದರಿಂದ ತಹಶೀಲದಾರ ಹುಕ್ಕೇರಿರವರು ಈ ಬಗ್ಗೆ ಸದರಿ ನ್ಯಾಯಬೆಲೆ ಅಂಗಡಿಯನ್ನು ರದ್ದು ಮಾಡುವ ಕುರಿತು ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿರವರಿಗೆ ಪತ್ರ ಬರೆದುಕೊಂಡಿದ್ದು, ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿರವರು ರಾಹುಲ ಕತ್ತಿ ಯುವಕ ಮಂಡಳದವರ ಪಡಿತರ ವಿತರಣೆಯನ್ನು ಅಮಾನತ್ತಿನಲ್ಲಿ ಇಟ್ಟಿರುತ್ತಾರೆ. ಸಧ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಮದಿಹಳ್ಳಿರವರು ಪಡಿತರ ವಿತರಣೆ ಮಾಡುತ್ತಿದ್ದು, ಮದಿಹಳ್ಳಿ ಗ್ರಾಮದಲ್ಲಿ ಅಕ್ಟೋಬರ-2017 ರಿಂದ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಯಲ್ಲಿರುತ್ತದೆ. ಪಡಿತರ ಹೊಂದಿದ ಕುಟುಂಬದ ಸದಸ್ಯರಲ್ಲಿ ಯಾರಾದರೂ ಮೃತರಾದರೇ, ಮೃತರಾದವರ ಹೆಸರನ್ನು ಕಡಿಮೆ ಮಾಡಿಸಿಕೊಳ್ಳುವುದು ಕುಟುಂಬದ ಸದಸ್ಯರದೇ ಕರ್ತವ್ಯವಾಗಿರುತ್ತದೆ. ಹಾಗೂ ಗ್ರಾಮದ ಜನನ ಮರಣಗಳ ಬಗ್ಗೆ ತಹಶೀಲ್ದಾರರವರಿಗೆ ಮಾಹಿತಿ ನೀಡುವುದು ಆ ಗ್ರಾಮದ ಗ್ರಾಮಲೆಕ್ಕಾಧಿಕಾರಿಯ ಕರ್ತವ್ಯವಾಗಿರುತ್ತದೆ. ಪಡಿತರ ಕುಟುಂಬದವರ ಮನೆಯಲ್ಲಿ ಯಾರಾದರೂ ಜನನವಾದರೆ ಹೊಸದಾಗಿ ಸೇರ್ಪಡೆ ಮಾಡುವುದು ಹಾಗೂ ಮರಣ ಹೊಂದಿದರೆ ಕಡಿಮೆ ಮಾಡುವ ಅಧಿಕಾರ ತಹಶೀಲದಾರರವರಿಗೆ ಮಾತ್ರ ಇದ್ದು, ನ್ಯಾಯಬೆಲೆ ಅಂಗಡಿಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದು ತಿಳಿಸಿರುವುದು ಸರಿಯಲ್ಲ.

12. ನಾವು ಗೌಪ್ಯವಾಗಿ ಮದಿಹಳ್ಳಿ ಗ್ರಾಮದ ಸಾರ್ವಜನಿಕರಿಗೆ ವಿಚಾರಣೆ ಮಾಡಲಾಗಿ ಪಡಿತರ ಸರಿಯಾಗಿ ವಿತರಣೆ ಮಾಡುತ್ತಾರೆ, ಅಂತಾ ತಿಳಿಸಿರುತ್ತಾರೆ. ಆದರೆ ಸಾರ್ವಜನಿಕರು ಪಡಿತರ ತೆಗೆದುಕೊಳ್ಳಲು ಬಂದಾಗ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಅವರ ಸಹಿ (Thumb)ಯನ್ನು ಪಿ.ಕೆ.ಪಿ.ಎಸ್.ನಲ್ಲಿ ಪಡೆದುಕೊಂಡು ಅಲ್ಲಿಂದ ಸುಮಾರು 200 ಮೀ. ದೂರದಲ್ಲಿರುವ

ಗ್ರಾಮ ಪಂಚಾಯತಿ ಹಳೆಯ ಕಟ್ಟಡದಲ್ಲಿ ಪಡಿತರ ವಿತರಣೆ ಮಾಡುತ್ತಾರೆ. ಮತ್ತು ಪಡಿತರ ವಿತರಣಾ ಕೇಂದ್ರಗಳು ಪ್ರತಿ ತಿಂಗಳು 1 ನೇ ತಾರೀಖಿನಿಂದ 10 ನೇ ತಾರೀಖಿನವರೆಗೆ ಮುಂಜಾನೆ 8.00 ಘಂಟೆಯಿಂದ ರಾತ್ರಿ 8.00 ಘಂಟೆಯವರೆಗೆ ಹಾಗೂ 11 ನೇ ತಾರೀಖಿನಿಂದ 31 ನೇ ತಾರಿಖಿನವರೆಗೆ ಮುಂಜಾನೆ 8.00 ರಿಂದ 12.00 ಘಂಟೆಯವರೆಗೆ ಮತ್ತು ಸಾಯಂಕಾಲ 4.00 ಘಂಟೆಯಿಂದ ರಾತ್ರಿ 8.00 ಘಂಟೆಯವರೆಗೆ ತೆರೆದಿರಬೇಕೆಂಬ ನಿಯಮವಿದ್ದರೂ ಸಹ ಪಿ.ಕೆ.ಪಿ.ಎಸ್. ಕಟ್ಟಡದಲ್ಲಿ 2-3 ದಿನ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಮೊದಲು ಸಾರ್ವಜನಿಕರ ಸಹಿ (Thumb) ಪಡೆದುಕೊಂಡು, ನಂತರ ಗ್ರಾಮ ಪಂಚಾಯತಿಯ ಕಟ್ಟಡದಲ್ಲಿ ಪಡಿತರ ವಿತರಣೆ ಮಾಡುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಕಂಡು ಬಂದಿರುತ್ತದೆ.

13. ಮಾನ್ಯ ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿರವರ ನ್ಯಾಯಾಲಯದಲ್ಲಿ ಕ್ರ:ಆಪೂವಿ/ಅದಅ/ಸಪ್ರಾವಿ/01/ 2019-20 ನೇದ್ದರಡಿ ದೂರುದಾರರಾದ ತಹಶೀಲದಾರ ಹುಕ್ಕೇರಿ ಹಾಗೂ ಇತರರು ಮತ್ತು ಎದುರುದಾರರಾದ ರಾಹುಲ್ ಕತ್ತಿ ಯುವಕ ಮಂಡಳ, ನ್ಯಾಯಬೆಲೆ ಅಂಗಡಿ ಸಂಖ್ಯೆ 106 ರ ನಡುವೆ ಮದಿಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಅಮಾನತ್ತುಪಡಿಸಿದ್ದರ ಬಗ್ಗೆ ವಿಚಾರಣೆಯು ನಡೆಯುತ್ತಿದ್ದು, ಅದು ದಿನಾಂಕ:30.07.2019 ರಂದು ವಿಚಾರಣೆ ಕೈಗೊಂಡು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿಟ್ಟಿದ್ದು ದಾಖಲಾತಿಗಳಂದ ಕಂಡು ಬಂದಿರುತ್ತದೆ." ಎಂದು ತಿಳಿಸಿರುತ್ತಾರೆ.

14. ಸದರಿ ಪ್ರಕರಣದ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಲಾಗಿ, ರಾಹುಲ್ ಕತ್ತಿ ಯುವಕ ಮಂಡಳಿಯ ಪಡಿತರ ರದ್ದುಪಡಿಸಿದ ನಂತರ ಮತ್ತು ಅದನ್ನು ಪೂರೈಕೆ ಮಾಡಲು ಬೇರೊಂದು ವ್ಯವಸ್ಥೆಯನ್ನು 1ನೇ ಎದುರುದಾರರು ವ್ಯವಸ್ಥೆ ಮಾಡಿದ ನಂತರ ಕೆಲವೊಂದು ಸಂದರ್ಭದಲ್ಲಿ ತೊಂದರೆಯಾಗಿರುವುದು ಕಂಡುಬರುತ್ತದೆ. ಸದರಿ ಪ್ರಕರಣದ ತನಿಖಾ ವರದಿ ಹಾಗೂ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತನಿಖಾಧಿಕಾರಿಯು ನಮುದಿಸಿರುವಂತೆ ಕೆಲವೊಂದು ಅಡಚಣೆ ಉಂಟಾಗಿರುವುದು ಕಂಡುಬರುತ್ತದೆ ಎಂದು ಅದನ್ನು ಎದುರುದಾರರು ಸರಿಪಡಿಸಲು ಕ್ರಮ ಕೈಗೊಂಡಿರುವುದು ಸಹಾ

ನಮೂದಿಸಿರುತ್ತಾರೆ. ವಿತರಣೆಯ ಸಂಬಂಧ ಮಾಡಲಾದ ತನಿಖೆಗೆ ಸಾಕ್ಷಿದಾರರು ಯಾವುದೇ ರೀತಿಯ ಹೆಚ್ಚಿನ ಬೇಡಿಕೆ ಸಲ್ಲಿಸಿರುವುದಿಲ್ಲವೆಂದು ತನಿಖೆಯಲ್ಲಿ ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಮೃತಪಟ್ಟ ವ್ಯಕ್ತಿಗಳ ಸಂಬಂಧ ವಿತರಿಸಲಾಗಿದೆ ಎಂಬುದು ಸರಿಯಿರುವುದಿಲ್ಲ. ಏಕೆಂದರೆ ಬಯೋಮೆಟ್ರಿಕ್‌ನಲ್ಲಿ ಕಾರ್ಡನ್ನು ಹೊಂದಿದ ವ್ಯಕ್ತಿ ಹೆಬ್ಬರಳನ್ನು ನೀಡಿದ್ದಲ್ಲಿ ಮಾತ್ರ ಆಯಾ ತಿಂಗಳ ಅಕ್ಕಿ, ಗೋಧಿ, ಇತರೆ ಪಡಿತರ ವಿತರಣೆ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಸತ್ತ ವ್ಯಕ್ತಿಗಳ ಹೆಸರಿನಲ್ಲಿ ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಕುಟುಂಬದ ಒಟ್ಟು ಸದಸ್ಯರಲ್ಲಿ ಒಬ್ಬ ಸದಸ್ಯ ಮೃತಪಟ್ಟಲ್ಲಿ ಕುಟುಂಬದ ಮುಖ್ಯಸ್ಥನು ಪಡಿತರ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಕುಟುಂಬದ ಮುಖ್ಯಸ್ಥನು ಕುಟುಂಬದ ಸದಸ್ಯನು ಮೃತಪಟ್ಟ ಬಗ್ಗೆ ಗ್ರಾಮಲೆಕ್ಕಾಧಿಕಾರಿಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಜೊತೆಗೆ ಸದರಿ ಮಾಹಿತಿಯನ್ನು ಪಡಿತರ ವಿತರಣೆ ಅಂಗಡಿಗೆ ತಿಳಿಸಬೇಕಾಗುತ್ತದೆ. ಆದರೆ ಗ್ರಾಮಲೆಕ್ಕಾಧಿಕಾರಿ ಮಾಹಿತಿಯನ್ನು ಪಡೆದುಕೊಂಡ ನಂತರ ಅದನ್ನು ಜನನ ಮತ್ತು ಮರಣ ದಾಖಲೆಯಲ್ಲಿ ನೋಂದಾಯಿಸಿಕೊಂಡು ಕುಟುಂಬದ ಮರಣ ಹೊಂದಿದ ಸದಸ್ಯನ ಹೆಸರನ್ನು ಕಡಿಮೆಮಾಡಲು ಸಾಧ್ಯವಾಗುತ್ತದೆ. ಫಿರ್ಯಾದಿದಾರರು ಆಪಾದಿಸಿದಂತೆ ಗ್ರಾಮಲೆಕ್ಕಾಧಿಕಾರಿ ಮೃತಪಟ್ಟ ಕುಟುಂಬದ ಸದಸ್ಯರ ಹೆಸರನ್ನು ಪಡೆದು ಮರಣ ನೋಂದಾಣಿ ಪುಸ್ತಕದಲ್ಲಿ ದಾಖಲಿಸಿದ ಮತ್ತು ಆ ಸಂಬಂಧ ದಾಖಲಿಸಿದ ದಾಖಲೆಯ ಅನ್ವಯ ಗಣಕಯಂತ್ರದಲ್ಲಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ಆಹಾರ ಪೂರೈಕೆ ಅಧಿಕಾರಿ ಜಂಟಿಯಾಗಿ ಸದರಿ ವ್ಯಕ್ತಿಯ ಹೆಸರನ್ನು ಗಣಕಯಂತ್ರದಲ್ಲಿ ತೆಗೆಯಬೇಕಾಗುತ್ತದೆ ಎಂದು ಆಕ್ಷೇಪಣೆಯಲ್ಲಿ ತಿಳಿಸಿರುವುದು ಸರಿಯಲ್ಲ.

15. ಸದರಿ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳು ಬೆಳಗಾಂ ಜಿಲ್ಲೆ ಇವರು ದಿ: 21/09/2015 ರ ವರದಿಯಲ್ಲಿ ;

(ಎ) ನ್ಯಾಯಬೆಲೆ ಅಂಗಡಿಯಲ್ಲಿ ಆಹಾರ ಧಾನ್ಯಗಳ ಸ್ಯಾಂಪಲ್ ಇಟ್ಟಿರುವುದಿಲ್ಲ,

(ಬಿ) ನ್ಯಾಯಬೆಲೆ ಅಂಗಡಿಯಲ್ಲಿ ದಾಸ್ತಾನುವಹಿ ಮತ್ತು ವಿತರಣಾ ವಹಿ ಅಂಗಡಿಯಲ್ಲಿ ಇಟ್ಟಿರುವುದಿಲ್ಲ ವಿಚಾರಣೆ ಸಮಯದಲ್ಲಿ ಬೇರೆಕಡೆಯಿಂದ ತಂದು ಹಾಜರು ಪಡಿಸಿರುತ್ತಾರೆ.

(ಸಿ) ದಾಸ್ತಾನು ವಹಿ ಪರಿಶೀಲಿಸಲಾಗಿ 15 ಕೆ.ಜಿ. ಅಕ್ಕಿ, 2 ಕೆ.ಜಿ. ಗೋಧಿ, 7 ಕೆ.ಜಿ. ಸಕ್ಕರೆ, 3 ಕೆ.ಜಿ. ಉಪ್ಪು, 3 ಕೆ.ಜಿ. ತಾಳೆ ಎಣ್ಣೆ, ಶಿಲ್ಕು ಇರುತ್ತದೆ. ವಾಸ್ತವಿಕವಾಗಿ ಪರಿಶೀಲಿಸಲಾಗಿ 1.70 ಕ್ವಿಂಟಲ್ ಅಕ್ಕಿ 4.10 ಕ್ವಿಂಟಲ್ ಗೋಧಿ, 0.50 ಕ್ವಂಟಲ್ ಸಕ್ಕರೆ, 360 ಲೀ. ಸೀಮೆ ಎಣ್ಣೆ, 25 ಕೆ.ಜಿ. ಉಪ್ಪು, 7 ಕೆ.ಜಿ. ತಾಳೆ ಎಣ್ಣೆ ಇರುವುದು ಕಂಡು ಬರುತ್ತದೆ.

(ಡಿ) ಅರ್ಹತಾ ಪಟ್ಟಿಯನ್ನು ಪರಿಶೀಲಿಸಲಾಗಿ ಪಡಿತರ ಪದಾರ್ಥಗಳನ್ನು ವಿತರಿಸಿದ ಬಗ್ಗೆ ಪಡಿತರ ಚೀಟಿದಾರರ ರುಜು ಪಡೆದಿದ್ದು, ಆದರೆ ದಾಸ್ತಾನು ಪರಿಶೀಲಿಸಲಾಗಿ ಅಂಗಡಿದಾರ ಪಡಿತರ ಚೀಟಿದಾರರಿಗೆ ಸರ್ಕಾರ ನಿಗದಿ ಪಡಿಸಿದ ಧರ ಹಾಗೂ ಪ್ರಮಾಣದಂತೆ ಆಹಾರ ಪದಾರ್ಥಗಳನ್ನು ವಿತರಿಸಿರುವುದಿಲ್ಲ.

(ಇ) ಪಡಿತರ ಚೀಟಿ ಸಂಖ್ಯೆ: ಹೆಚ್.ಯು.ಕೆ. 12150059, ಹೆಚ್.ಯು.ಕೆ. 14150204, ಹೆಚ್.ಯು.ಕೆ.14150207, ಹೆಚ್.ಯು.ಕೆ.ಆರ್. 00103703, ಹೆಚ್.ಯು.ಕೆ.ಆರ್. 00121305, ಹೆಚ್.ಯು.ಕೆ. 14150317, ಹೆಚ್.ಯು.ಕೆ. 14150327, ಹೆಚ್.ಯು.ಕೆ. 14150123, ಹೆಚ್.ಯು.ಕೆ. 14150131, ಹೆಚ್.ಯು.ಕೆ. 14150220, ಹೆಚ್.ಯು.ಕೆ. 14150086, ನೇದ್ದರ ಪಡಿತರ ಚೀಟಿಗಳು ಏಕ ಸದಸ್ಯರ ಕುಟುಂಬ ಪಡಿತರ ಚೀಟಿಗಳದ್ದು, ಪಡಿತರ ಚೀಟಿಗಳಲ್ಲಿ ಕೆಲವು ಪಡಿತರು ಮೃತರಾಗಿರುತ್ತಾರೆ. ಕೆಲವರು ಊರಲ್ಲಿ ವಾಸಿಸುವುದಿಲ್ಲ, ಪಡಿತರ ಚೀಟಿದಾರರ ರುಜು ಕೊಟ್ಟಿ ರುಜು ಮಾಡಿರುವುದು ಕಂಡುಬರುತ್ತದೆ.

(ಎಫ್) ಪಡಿತರ ಚೀಟಿದಾರರಿಗೆ ಪಡಿತರ ವಿತರಿಸದ ಬಗ್ಗೆ ರಸೀದಿ ನೀಡಿರುವುದಿಲ್ಲ. ನೀಡಿದ್ದರೂ ಸಹಾ ಅವರ ರುಜು ಪಡೆದಿರುವುದಿಲ್ಲ.

(ಜಿ) ಪಡಿತರ ಚೀಟಿದಾರರಿಗೆ ಸರ್ಕಾರ ನಿಗದಿಪಡಿಸಿದ ದರ ಪ್ರಮಾಣದಂತೆ ವಿತರಿಸಿರುವುದಿಲ್ಲ. ಈ ಬಗ್ಗೆ ಎದುರುದಾರ 2 ಇವರು ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಿದ್ದು, ಜಿಲ್ಲಾಧಿಕಾರಿಯವರು ರಾಹುಲ್ ಕತ್ತಿ ಯುವಕ ಮಂಡಳಿಯ ನ್ಯಾಯಬೆಲೆ ಅಂಗಡಿ 106 ತಾತ್ಕಾಲಿಕ ಸ್ಥಗಿತಗೊಳಿಸಿ ಅಮಾನತ್ತಿನಲ್ಲಿಟ್ಟು ಅಧೇಶಿಸಿರುವುದು ನಮೂದಿಸಲಾಗಿರುತ್ತದೆ. ಸದರಿ ಅಂಶದಿಂದ ಎದುರುದಾರ 2 ಇವರು ಪಡಿತರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗೆ ಸರಬರಾಜು ಮಾಡಿದ ನಂತರ ಪ್ರತಿ ಬಾರಿಯೂ ಸ್ಥಾನಿಕವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಕರ್ತವ್ಯವಾಗಿರುತ್ತದೆ. ಆದರೆ ಎದರುದಾರ

2 ಇವರು ದೂರುದಾರರು ಅರ್ಜಿ ನೀಡಿದರೂ ಸಹಾ ಮತ್ತು ಜಿಲ್ಲಾಧಿಕಾರಿಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದರೂ ಸಹಾ ಯಾವುದೇ ಕ್ರಮ ಜರುಗಿಸದೇ ಹೋಗಿರುವುದು ಕಂಡುಬರುತ್ತದೆ. ನಂತರ ಜಿಲ್ಲಾಧಿಕಾರಿಗಳ ಆದೇಶದಂತೆ ಮೇಲ್ಕಾಣಿಸಿದ ಅಂಶಗಳಿಗೆ ವರದಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಆದ್ದರಿಂದ ಎದುರುದಾರ 2 ಇವರು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿರುವ ಅಂಶಗಳನ್ನು ಪರಿಗಣಿಸಲು ಬರುವುದಿಲ್ಲ. ಗಣಕಯಂತ್ರದ ಮೂಲಕ ಪಡಿತರಿಗೆ ವಿತರಣೆ ಮಾಡುತ್ತಿರುವುದರಿಂದ ಮೋಸ ಮಾಡಲು ಬರುವುದಿಲ್ಲವೆಂದ ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿದ ವರದಿಗೆ ವ್ಯತಿರಿಕ್ತವಾಗಿ ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ಇವರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯ ಸಂಧರ್ಬದಲ್ಲಿ ಜಿಲ್ಲಾಧಿಕಾರಿಯವರ ಮುಂದೆ ಸಲ್ಲಿಸಿದ ವರದಿಯಿಂದ ಕಂಡುಬರುತ್ತದೆ. ಆದ್ದರಿಂದ ಎದುರುದಾರ 2 ಇವರು ತಮ್ಮ ಕರ್ತವ್ಯವನ್ನು ಪಾಲಿಸದೇ ನಿರ್ಲಕ್ಷ್ಯ ವಹಿಸಿರುವುದು ಮತ್ತು ಸದರಿ ನಿರ್ಲಕ್ಷ್ಯತನದಿಂದ ಸರ್ಕಾರದಿಂದ ಪಡಿತರ ವಿತರಣೆಗೆ ಬರುವ ಪದಾರ್ಥಗಳನ್ನು ಮೃತ ವ್ಯಕ್ತಿಗಳ ಹೆಸರಿನಲ್ಲಿ ವಿತರಿಸಿದಂತೆ ದಾಖಲೆಗಳನ್ನು ಪಡಿತರ ಅಂಗಡಿಯವರು ಸೃಷ್ಟಿಸಿರುವುದನ್ನು ಯಾವುದೇ ಕ್ರಮ ಜರುಗಿಸದೇ ಹೋಗಿರುವುದರಿಂದ ಹಾಗೂ ಎದುರುದಾರ 1 ಇವರು ತನ್ನ ಕರ್ತವ್ಯವನ್ನು ಸರಿಯಾಗಿ ನಿಭಾಯಿಸದೇ ಮತ್ತು ಎದುರುದಾರ 2 ಇವರು ನಿಭಾಯಿಸುತ್ತಿರುವ ಕರ್ತವ್ಯದ ಬಗ್ಗೆ ಪರಿಶೀಲಿಸದೇ ಪಡಿತರ ಅಂಗಡಿಗಳಿಗೆ ಭೇಟಿ ನೀಡದೇ ತಮ್ಮ ಕರ್ತವ್ಯ ದಲ್ಲಿ ನಿರ್ಲಕ್ಷ್ಯ ತೋರಿರುವ ಕಾರಣ ಎದುರುದಾರ 1 ಮತ್ತು 2 ಇವರು ನೇರವಾಗಿ ಹೋಣೆಗಾರರಾಗಿರುತ್ತಾರೆ. ಆದ್ದರಿಂದ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಒಪ್ಪಲು ಬರುವುದಿಲ್ಲ. ಎದುರುದಾರರ ನಿರ್ಲಕ್ಷತನದಿಂದ ಸರ್ಕಾರಕ್ಕೆ ನಷ್ಟವುಂಟಾಗಿದ್ದು, ಎದುರುದಾರರ ಕರ್ತವ್ಯಲೋಪದಿಂದ ಆಗಿರುವುದು ಕಂಡುಬರುತ್ತದೆ.

16. ಸದರಿ ಪ್ರಕರಣದಲ್ಲಿ ಎದುರುದಾರರು ಮೃತ ವ್ಯಕ್ತಿಗಳ ಹೆಸರಿನಲ್ಲಿ ಪಡಿತರ ಅಂಗಡಿಯ ಮಾಲೀಕರು ಪಡಿತರ ವಿತರಿಸಿದಂತೆ ದಾಖಲಿಸಿರುವುದು ಸಾಬೀತಾಗಿರುವುದರಿಂದ ಪಡಿತರ ದಾಖಲೆಗಳನ್ನು ಮೃತ ವ್ಯಕ್ತಿಗಳು ಇರುವಲ್ಲಿ ಸರಿಪಡಿಸಿ ಮೃತರನ್ನು ದಾಖಲೆಯಿಂದ ತೆಗೆದು ಎಲ್ಲಾ ಪಡಿತರ ಕುಟುಂಬಗಳ ಚೀಟಿಗಳನ್ನು ಮರುಪರಿಶೀಲಿಸಿ ಕ್ರಮ ಜರುಗಿಸುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಮಾನ್ಯ ಜಿಲ್ಲಾಧಿಕಾರಿಗಳು ಈ

ಕುರಿತು ಕ್ರಮ ವಹಿಸಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಬೇಕಾಗಿರುತ್ತದೆ. ಆದ್ದರಿಂದ, ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ಸೂಕ್ತ ಕ್ರಮ ಕೈಗೊಂಡು ಮದಿಹಳ್ಳಿ ನ್ಯಾಯಬೆಲೆ ಅಂಗಡಿಯ ನಂ.106 ಬೇಣಿವಾಡದ ಪಿ.ಕೆ.ಪಿ.ಎಸ್ ಸಂಘಕ್ಕೆ ನೀಡಿರುವ ನವೀಕರಣದ ಸಂಬಂಧ ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಮೃತ ವ್ಯಕ್ತಿಗಳು ಪಡಿತರ ಚೀಟಿಗಳಲ್ಲಿ ಹೆಸರುಗಳನ್ನು ಹೊಂದಿರುವಲ್ಲಿ ಸದರಿಯವರ ಹೆಸರುಗಳನ್ನು ಚೀಟಿಯಿಂದ ತೆಗೆದು ಸೂಕ್ತ ವ್ಯವಸ್ಥೆಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

17. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

28-12-20

**[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**